Regd No BG 155 — ೨೯ — 6—3—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ನಾಯಕತ್ವ ನಿರ್ಧರಿಸಲು ಹೈ ಕಮಾಂಡ್ ಪ್ರತಿನಿಧಿಗೆ ಪೂರ್ಣಾಧಿಕಾರ

ಕಾಂಗ್ರೆಸಿನ ವಿರುದ್ಧ ಹೋರಾಡಲು ರಾಜಾಜಿ ಕರೆ

ಮೈಸೂರು ಶಾಸನ ಸಭೆ ಕಾಂಗ್ರೆಸು ಪಕ್ಷದ ನಾಯಕತ್ವ ಚುನಾವಣೆ ನಡೆಸಲು ಕೇಂದ್ರ ಸರ್ಕಾರಿಂದ ಗೃಹಮಂತ್ರಿ ಶ್ರೀ ಲಾಲಬಹದ್ದೂರ ಶಾಸ್ತ್ರಿಯವರು ಗುರುವಾರ ಆಗಮಿಸುವ ನಿರೀಕ್ಷೆ ಇದೆ ಅವರು ಬರುವದಕ್ಕೆ ಸಾಧ್ಯವಾಗದಿದ್ದರೆ ರೈಲ್ವೆ ಮಂತ್ರಿ ಶ್ರೀ ಜಗಜೀವನರಾಂ ಬರುವರು. ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿಯವರ ನೇತೃತ್ವದ ಗುಂಪಿಗೂ, ಶ್ರೀ ಎಸ್ ನಿಜಲಿಂಗಪ್ಪನವರ ನೇತೃತ್ವದ ಗುಂಪಿಗೂ ಬಹಿರಂಗ ಸ್ಪರ್ಧೆ ಶಡೆಯಲಿ. ಹೈ ಕಮಾಂಡ್ ಕಾರ್ಯಂವಾಗಿದೆ ಹೈ ಕಮಾಂಡ್ ಪ್ರತಿನಿಧಿ ನಾಯಕರೊಡನೆ ಸಮಾಲೋಚಿಸಿದ ಮೇಲೆ ಉದ್ದೇಶದಿಂದ 8 ನೇಯ ತಾ|| ಬೆಳಿಗ್ಗೆ ನಡೆಯಬೇಕಾಗಿದ್ದ ಶಾಸನ ಸಭೆಯ ಕಾಂಗ್ರೆಸು ಪಕ್ಷದ ಸಭೆ ಪಧ್ಯಾಹ್ನಕ್ಕೆ ಹೋಗಿದೆ ಪಕ್ಷದ ಒಹುಮತಾಭಿಪ್ರಾಯದಂತೆ ನಾಯಕ ಚುನಾವಣೆ ಆಗಬೇಕೆಂದು ನಿಜಲಿಂಗಪ್ಪನವರು ಪ್ರಸ್ತಾಪಿಸಿದ್ದಾರೆ ನಾಯಕತ್ವದ ಪಶ್ನೆಯನ್ನು ಪರಿಹರಿಸಲು ಹೈ ಕಮಾಂಡಿನ ಪ್ರತಿನಿಧಿಗೆ ಪೂರ್ಣಾಧಿಕಾರವಿರುವದು

ಸತ್ಯಾಗ್ರಹದ ಬೆದರಿಕೆ

ಶ್ರೀ ಪಭುದತ್ತ ಬ್ರಹ್ಮಚಾರಿ ಎಂಬವರು ಸತ್ಯಾಗ್ರಹ ಹೂಡುವ ಬೆದರಿಕೆ ಮಾಡಿರುವದಾಗಿ ನವಧಾಂದಿಂದ ವರದಿ ಒಂದಿದೆ ಕುಂಭಕರ್ಣಾಗಿ ಬೃಂದಾವನಕ್ಕೆ ಬರುವ ಯಾತ್ರಿಕರಿಗೆ ಒಲತಕ್ಕಾಂದಿದ ಇನಾಕ್ಯುಲೇಷನ್ ಮಾಡವದನ್ನು ನಿಲ್ಲಿಸದಿದ್ದರೆ ಈ ಕೃಮ ತೆಗೆದುಕೊಳ್ಳುವದಾಗಿ ಅವರು ನುಡಿದಿರುವರು.

ಭಾರತಕ್ಕೆ ಖಾಯಂ ಸ್ಥಾನ

ಬ್ರಿಟಿಷ್ ಲೇಬರ್ ಪಕ್ಷದ ಕಾರ್ಯಕರ್ತ ಡೇನಿಡ್ ಎನಾಲ್ಸ್‌ರವರು ನಿನ್ನೆ ಲಂಡನ್ನಿನಲ್ಲಿ ಹೇಳಿಕೆಯೊಂದನ್ನು ಭಾರತಕ್ಕೆ ಭದ್ರತಾಸಂಸ್ಥೆಯಲ್ಲಿ ಖಾಯಂ ಸ್ಥಾನ ಸಿಗಬೇಕೆಂದು ತಿಳಿಸಿದರು

ರಾಜ್ಯಾಂಗ ವಿರೋಧ ಪಕ್ಷ ಎಂಬುದಾಗಿ ತಾವು ತಿಳಿದಿರುವ ಕಾಂಗ್ರೆಸಿನೊಡನೆ ಹೋರಾಡಲು ರಾಜ್ಯಾಂಗ ರಂಗ ಸಂಸ್ಥಾಪನೆಯ ಸೂಚನೆಯನ್ನು ಸ್ವತಂತ್ರ ಪಕ್ಷದ ಸಂಸ್ಥಾಪಕ ನಾಯಕರಾದ ರಾಜಾಜಿಯವರು ಮಾಡಿರುವರೆಂದು ಮದ್ರಾಸಿನಿಂದ ವಾರ್ತೆ ಬಂದಿದೆ. ರಾಜಾಂಗದ ಮೂಲಕ ಇತ್ತಿದ್ದ ಮೂಲಭೂತ ಹಕ್ಕುಗಳನ್ನು ಕಡಿತ ಮಾಡಿ ಶಸ್ತ ಒಂದೇ ಪಕ್ಷದ ಪಡಳಿತವನ್ನು ಮುಂದುವರಿಸಲು ಸರ್ವ ವಿಧದಲ್ಲೂ ಕಾಂಗ್ರೆಸ್ ಕೆಲಸ ಮಾಡುತ್ತಿದೆ ಎಂದು ರಾಜಾಜಿ ನಡಿದರು ಈ ಅಭಿಪ್ರಾಯವನ 3 ನೇಯ ಚುನಾವಣೆಯು ಫಲಿತಾಂಶಗಳು ಸ್ಪಷ್ಟಪಡಿಸಿವೆ ಎಂದರು. ರಾಜ್ಯಾಂಗವನ್ನು ಗೌಂವಿಸುವ ಮತ್ತು ರಾಜ್ಯಾಂಗದಲ್ಲಿ ಮೂಲಭೂತಹಕ್ಕುಗಳನ್ನು ಹೊಂದಿರುವ ಪಕ್ಷಗಳೆಲ್ಲ ಕಾಂಗ್ರೆಸಿನ ವಿರುದ್ಧ ರಾಜ್ಯಾಂಗ ರಂಗವಾಗಬೇಕೆಂದರು

ಕಾಶ್ಮೀರ ಮಾತುಕತೆ

ಉನ್ನತ ಮಟ್ಟದ್ದು ಅಲ್ಲದೆ ಬೇರೆ ವಿಧದ ದ್ವಿಮುಖ ಮಾತುಕತೆಗಳನ್ನು ಕಾಶ್ಮೀರ ಸಂಬಂಧಪಟ್ಟಂತೆ ನಡೆಸಲು ಭಾರತ ಮತ್ತು ಪಾಕಿಸ್ತಾನ ಸಾಧ್ಯತೆಗಳನ್ನು ಪರಿಶೀಲಿಸುತ್ತಿರುವದಾಗಿ ಕರಾಚಿಯಿಂದ ವಾರ್ತೆ ಬಂದಿದೆ

ರಷ್ಯದ ಒಪ್ಪಿಗೆ

ಜಿನೀವಾ ನಿಶ್ಯಸ್ತ್ರೀಕರಣ ಸಮ್ಮೇಳನದ ವಿದೇಶ ಮಂತ್ರಿಗಳ ಮಟ್ಟದಲ್ಲಿ ನಡೆಯುಲೆಂದು ಅಮೆರಿಕ-ಬ್ರಿಟನ್ ಮಾಡಿದ ಸೂಚನೆಗೆ ರಷ್ಯದ ಪಧಾನಿ ನಿಕಿಟ ಕ್ರುಶ್ಚೇವರು ಒಪ್ಪಿರುವರೆಂದು ಬ್ರಿಟಿಷ್ ಪ್ರಧಾನಿ ಮ್ಯಾಕ್ಮಿಲನ್ ನಿನ್ನೆ ಲಂಡನ್ನಿನಲ್ಲಿ ತಿಳಿಸಿದರು ಈ ಸಮ್ಮೇಳನದಲ್ಲಿ ಫ್ರಾನ್ಸ್ ಭಾಗವಹಿಸುವದಿಲ್ಲವೆಂದು ಪ್ರಕಟವಾಗಿದೆ.

ಕಾಂಗ್ರೆಸ್ ಅಧ್ಯಕ್ಷತೆ

ಶ್ರೀಮತಿ ಇಂದಿರಾಗಾಂಧಿಯವರು ಕಾಂಗ್ರೆಸಿನ ಅಧ್ಯಕ್ಷರಾಗುವರೆಂದು ದೆಹಲಿಯ ಕೆಲವು ವೃತ್ತಗಳಲ್ಲಿ ವ್ಯಕ್ತವಾಗಿದೆ ಆಂಧ್ರದ ಮುಖ್ಯ ಮಂತ್ರಿ ಆಗುವ ಶ್ರೀ ಎ. ಸಂಜೀವರೆಡ್ಡಿಯವರ ಸ್ಥಾನದಲ್ಲಿ ಕಾಂಗ್ರೆಸು ಅಧ್ಯಕ್ಷರನ್ನು, 9 ನೇಯ ತಾ|| ದೆಹಲಿಯಲ್ಲಿ ಸಮಾವೇಶವಾಗುವ ಕಾಂಗ್ರೆಸು ಕಾರ್ಯಕಾರಿ ಸಮಿತಿ ಚುನಾಯಿಸುವ ಸಂಭವವಿದೆ

★

ನವದೆಹಲಿ 5— ಜಮ್ಮು ಮತ್ತು ಕಾಶ್ಮೀರ ರಾಜ್ಯದ 19 ಸ್ಥಾನಗಳು ಮತ್ತು ಉಳಿದ ರಾಜ್ಯಗಳಲ್ಲಿ ಏಳು ಸ್ಥಾನಗಳ ಹೊರತಾಗಿ ಉಳಿದ ಎಲ್ಲ ವಿಧಾನ ಸಭಾ ಸ್ಥಾನಗಳಿಗಾಗಿ ಮತಗಳ ಎಣಿಕೆ ಮುಕ್ತಾಯವಾಗಿದೆ — ಇಲ್ಲಿಯವರೆಗೆ 2904 ಸ್ಥಾನಗಳ ಬಗ್ಗೆ ಫಲಿತಾಂಶಗಳು ಪ್ರಕಟವಾಗಿವೆ ; ಕಾಂಗ್ರೆಸ್ಸು ಪಧನ ಸ್ಥಾನ ಸ್ವತಂತ್ರಪಕ್ಷ ದ್ವಿತೀಯ ಸ್ಥಾನ ಪಡೆದಿದೆ ; ಕಾಂಗ್ರೆಸ್ಸು 1768, ಸ್ವತಂತ್ರಪಕ್ಷ 167, ಕಮ್ಯುನಿಸ್ಟ್‌ಪಕ್ಷ 153, ಪಿಎಸ್ಪಿ 149 ಜನಸಂಘ 115 ಸ್ಥಾನಗಳನ್ನು ಗಳಿಸಿಕೊಂಡಿವೆ

ನವದೆಹಲಿ 5 — ಅರ್ಜಂಟೈನಾದ ಮಾರೆಡೆಲ್ ಪ್ಲಾಟಾದಲ್ಲಿ 1922 ರ ಮಾರ್ಚ್ 21 ರಿಂದ ನಡೆಯಬೇಕಾಗಿರುವ ನಾಲ್ಕನೆಯ ಅಂತರಾಷ್ಟ್ರೀಯ ಚಲಚಿತ್ರೋತ್ಸವದಲ್ಲಿ ಭಾರತವು ಭಾಗವಹಿಸಲು ಸಾಧ್ಯವಾಗದಿಲ್ಲ

ನಾಗಾಲಾಂಡಿನ ಬಗ್ಗೆ ಫೀಜೋ ಸ್ಥಾಪನೆ ಮಾಡಲೇಕೆ ಕೋರಿರುವದನ್ನು ಭಾರತ ಸರ್ಕಾರ ಮಾನ್ಯ ಮಾಡದಿಲ್ಲವೆಂದ ಗೊತ್ತಾಗಿದೆ ಎಂದು ನವದೆಹಲಿ ವಾರ್ತೆ ಫೀಜೋ ಈಗ ಬ್ರಿಟನ್ನಿನ ಪ್ರಜೆ ಆಗಿದ್ದಾರೆ

ವಿವಿಧ ವಿಷಯಗಳು

ನವದೆಹಲಿ 5— ಪ್ರಸಕ್ತ ಲೋಕಸಭೆಯ ಅಧಿವೇಶನ ಮಾರ್ಚ 12 ರಿಂದ ಆರಂಭವಾಗುತ್ತದೆ : ಈ ಅಧಿವೇಶನದಲ್ಲಿ ಸಭೆಯು ಮುಂದೆ ಹೊಸದಾಗಿ ಎಂಟು ವಸೂದೆಗಳು ಮಂಡಿಸಲ್ಪಡುತ್ತವೆ, ಇವುಗಳಲ್ಲಿ ಎಂಡು ಗೋವಾ, ಡಾವರ್ ವತ್ತು ದೀವ್‌ಗಳಿಗೆ ಸಂಬಂಧಪಟ್ಟವು ; ಇವೆಡನ್ನೂ ಅಧಿವೇಶನ ಸಮಯದಲ್ಲಿ ಶಾಂಗೀಕರಿಸಲಾಗುವುದು

ಭಾರತ-ಪಾಕಿಸ್ತಾನ ಗಡಿ ಮುಮ್ಮಾಟಿನ ಒಳ ನಿನ್ನೆ ಬೆಳಿಗ್ಗೆ ಭಾರತ ಪೋಲೀಸರಿಗೂ ಪಾಕಿಸ್ತಾನದ ಅಕ್ರಮ ಸಾಗಾಣಿಕೆಗಾರರಿಗೂ ಆದ ಕಾಳಗದಲ್ಲಿ ನಾಲ್ವರು ಅಕ್ರಮ ಸಾಗಾಣಿಕೆಗಾರರು ಮಡಿದರು

ಉತ್ತರ ಪ್ರದೇಶ ಶಾಸನ ಸಭೆ ಕಾಂಗ್ರೆಸು ಪಕ್ಷದ ನಾಯಕರಾಗಿ ಶ್ರೀ ಸಿ ಬಿ ಗುಪ್ತರವರು ಸರ್ವಾನುಮತದಿಂದ ಚುನಾಯಿತರಾದರು.

ಗೋವಾ, ಡಿಯು, ಡಾವರ್ ಆಡಳಿತ ಸಂಬಂಧಿಸಿದಂತೆ ಭಾರತ ರಾಷ್ಟ್ರಪತಿಯವರು ನಿನ್ನೆ ದೆಹಲಿಯಿಂದ ಆರ್ಡಿನೆನ್ಸ್ ಹೊರಡಿಸಿದರು.

ನಾಳೆಯ ಪಂಚಾಂಗ

ಅನಂತನ ಮಹಾವಿಷ್ಣು ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

ಪ್ರಥಮ ಪೂರ್ವಾಭಾದ್ರ

೦೦

ನಿನ್ನೆ ರಾತ್ರಿ 9 ವರೆ ಗಂಟೆಯಲ್ಲಿ ವೈಸೂರಿನ ಎ ಡಿವಿಜ್ ಸರ್ಕಲ್ ಇನ್ಸ್ಪೆಕ್ಟರರು ಪುಲಿಕೇಶಿ ಎಂಬ್ಲಿಯಲ್ಲಿ ಸಯ್ಯದ್ ಯಾಕೂಬ ಮನೆ ಮೇಲೆ ದಾಳಿ ಮಾಡಿ ಮಂಡ್ಯ ಬ್ಯಾಂಡಿ 33 ಅರ್ಧ ಬಾಟಲು ಗಂಧದ ಚೂರು 2 ವರೆ ಮಣ ಎಲ್ಲ ಸೇರಿ ರೂ 1 ಸಹಸ್ರ ಬೆಲೆಯುದು ವಶಪಡಿಸಿಕೊಂಡರು

ವಿವಿಧ ವಾರ್ತೆಗಳು

★

ಬಂತ್ತಾದ ನೂತನ ಸಂಕಾಂವು ತಾಟಸ್ಥ್ಯ ನೀತಿಯನ್ನು ಅನುಸರಿಸುವುದೆಂದು ಪ್ರಕಟವಾಗಿದೆ

ಮೈಸೂರು ರಾಜ್ಯದಲ್ಲಿ ಶಾಸನಸಭೆಗೆ ಸ್ಪರ್ಧಿಸಿದ್ದ 679 ಮಂದಿಯಲ್ಲಿ 251 ಮಂದಿ ಡಿಪಾಜಿಟ್ಟು ಕಳೆದುಕೊಂಡರು.

ಅಥೋಲಿಗೆ ಸ್ವಲ್ಪ ದೂಂದಲ್ಲಿ ರೈಲೊಂದು ಸೇತುವೆಯಿಂದ 200 ಅಡಿ ಕೆಳಗಿನ ಸೇತುವೆಗೆ ಬಿದ್ದಿತು.

ಜೋಹನ್ಸಬರ್ಗು ಹೋಟಲಿನಲ್ಲಿ ನೌಕರರಿಗೆ ದೊರೆಯುವ ಬಕ್ಷೀಸಿನ ಮೇಲೆ ತೆರಿಗೆ ವಸೂಲ್ಮಾಡುತ್ತಿರುವುದಕ್ಕೆ ಗೊಣಗುಟ್ಟುತ್ತಿರುವರು.

ಗೋಧಿ. ಹಾಲು, ತರಕಾರಿ ಒಳ್ಳೇ ಸಮತೂಕದ ಆಹಾರವೆಂದು ಸುರಿಸ ಅಮೇರಿಕಾ ಆಹಾರಾಂತರ್ಜ್ಞೆ ಎಸ್. ಜೋಲೆಕ್ ವೆನ್ಸ್ಟಾಹು ಅಭಿಪ್ರಾಯಪಟ್ಟಿರುವರು.

ಪೋಲೀಸರಿಗೆ ಸುಳ್ಳುದೂರು ಕೊಟ್ಟಿದ್ದಕ್ಕಾಗಿ ಇಂಡಿಯನ್ ಮರ್ಕೆಂಟೈಲ್ ಇನ್ಷೂರೆನ್ಸು ಕಾರ್ಪೋರೇಷನ್ನಿನ ಅಕೌಂಟೆಂಟು ರಾಮನಾಥ್ ಮತ್ತು ಕ್ಯಾಸಿಯರು ಶ್ರೀನಿವಾಸನ್ನರಿಗೆ ತಲಾ ನೂರು ರೂ. ಜುಲ್ಮಾನೆ ವಿಧಿಸಲಾಯಿತೆಂದು ಮದರಾಸು ವಾರ್ತೆ ತಿಳಿಸುತ್ತದೆ.

ಮದರಾಸು— ಡಿ ಎಂ ಕೆ ದ್ರಾವಿಡಸ್ಥಾನ ಸ್ಥಾಪನೆ ಕೇಳಿಕೆಯನ್ನು ಬಿಡುವುದಿಲ್ಲವೆಂದು, ಅದರ ನಾಯಕ ಶ್ರೀ ಅಣ್ಣಾದುರೈ ಹೇಳಿರುವರು.

ಲಂಡನ್— ದಕ್ಷಿಣ ಅಟ್ಲಾಂಟಿಕ್ ಸಾಗರದ ಫಾಕ್ಲೆಂಡು ದ್ವೀಪಗಳು ಮೊದಲಾದವು ಬ್ರಿಟಿಷ್ ಅಂಟಾರ್ಟಿಕ್ ದೇಶವಾಗಿ ಬ್ರಿಟನ್ನಿನ ಹೊಸ ಕಾಲೊನಿಯಾಯಿತು.

ವಾಷಿಂಗ್ಟನ್ 4— ಚಂದ್ರನ ಮೇಲೆ ನೆಲೆಸಿ ಅಗ್ರಹದಲ್ಲಿನ ವಿಷಯಗಳನ್ನೆಲ್ಲಾ ಅರಿತು ಬರುವುದರಲ್ಲಿ ರಷ್ಯಾಕ್ಕಿಂತ ಅಮೇರಿಕಾ ಮುಂದಾಗುವುದೆಂದು ಏರ್ || ಜೇಮ್ಸ್ ವೆಬ್ ಹೇಳಿದರು.

ನೇಪಾಳದ ಮಹೇಂದ್ರ ರಾಜನನ್ನು ವಿರೋಧಿಸುತ್ತಾ, ಈಗ ಭಾರತದಲ್ಲಿ ನೆಲೆಸಿರುವ 76 ಮಂದಿ ನೇಪಾಳೀಯರು 21 ದಿವಸಗಳಲ್ಲಿ ನೇಪಾಳಕ್ಕೆ ಹಿಂದಿರುಗದಿದ್ದರೆ ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ನೇಪಾಳ ಸಂಕಾರ ಆಜ್ಞೆ ಹೊರಡಿಸಿದೆ.

ನವದೆಹಲಿ— ಇಂಡೋನೇಷಿಯಾದ ರಾಮಾಯಣ ಗೀತನಾಟಕ ಮಂಡಲಿಯೊಂದು ಈ ವರ್ಷ ಶಂಕರ್ಸಾಲದಲ್ಲಿ ಭಾರತದಲ್ಲಿ ಎಂಡು ವಾರಗಳ ಕಾಲ ಪ್ರವಾಸ ಕೈಗೊಳ್ಳುವ ನಿರೀಕ್ಷಣೆಯಿದೆ.

ನವದೆಹಲಿ— ರಾಷ್ಟ್ರೀಯ ವ್ಯವಸಾಯ ಮೇಳದ ಅಮೇರಿಕಾ ಮಂಟಪಕ್ಕೆ ಭೇಟಿ ಇತ್ತ ಪ್ರೇಕ್ಷಕರಲ್ಲಿ 50 ಲಕ್ಷದವನಾದ ತಿರುನಲ್ವೇಲಿಯ ರೈತ ಮುತ್ತಯ್ಯ ನಾಡಾರ್‌ಗೆ ಒಂದು ಮಂದ ಸ್ಕ್ರೀನ್ (ಎತ್ತುಗಳು ಎಳೆಯಬಹುದಾದ ಒಂದು ಸಾಧನ) ಬಹುಮಾನವಾಗಿ ನೀಡಲಾಯಿತು.

ನೀತಿಬೋಧಕ ಬೊಂಬೆಗಳು

ಜಪಾನಿನ ಅತ್ಯಂತ ಸುಂದರ ದೇವಾಲಯವೊಂದು ನಿರ್ಮಾಣದಲ್ಲಿದೆ: ಮಾನವನ ಅತ್ಯಪರಿಪೂರ್ಣತೆಯ ಮಾರ್ಗಗಳನ್ನು ರೂಪಿಸುವ ಮೂರು ಕೆತ್ತನೆಯ ಮಂಗಗಳು ಅಲ್ಲಿವೆ : ' ಕೇಡು ಕಾಣಬೇಡ ಕೇಡು ಕೇಳಬೇಡ, ಕೇಡು ಆಡಬೇಡ ಎಂಬೀ ಸೂತ್ರಗಳನ್ನು ರೂಪಿಸಲು, ಒಂದು ಮಂಗವು ತನ್ನ ಕೈಗಳಿಂದ ಕಣ್ಣು ಮುಚ್ಚಿಕೊಂಡಿದೆ ; ಇನ್ನೊಂದು ಕಿವಿಗಳನ್ನು ಮುಚ್ಚಿಕೊಂಡಿದೆ : ಮತ್ತೊಂದು ಬಾಯಿ ಮುಚ್ಚಿಕೊಂಡಿದೆ.

ವುಡ್‌ಲ್ಯಾಂಡ್ಸ್ ಕೀರ್ತಿಯುತ 4 ನೇ ವಾರ

.... ನೋಡಿದವರೆಲ್ಲಾ ಪ್ರಶಂಸಿಸುತ್ತಿರುವ ಅಪೂರ್ವ ಚಿತ್ರ ರತ್ನ ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜಯಪ್ರದ 2 ನೇ ವಾರ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್

[ದಿನವಹಿ 3 ಆಟಗಳು]

Help The 'Gorakshana'

Advertise in Goraksana and help the pious cause

★

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.



Launch Vehecle

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.